**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಸ್ಪೆಷಲ್.ಕೇಸ್ 70/19**

**ದಿನಾಂಕಃ 07.10.2024**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 6 (ಚಾ.ಸಾ.6)**

| | | |
|---|---|---|
| **ಹೆಸರು** | **ಃ** | **ಡಾ.ಸುಖೇಶ್** |
| **ತಂದೆಯ ಹೆಸರು** | **ಃ** | **ಲೇಟ್ ಶಂಕರೇಗೌಡ** |
| **ವಯಸ್ಸು** | **ಃ** | **36 ವರ್ಷ** |
| **ಉದ್ಯೋಗ** | **ಃ** | **ಹಿರಿಯ ಪಶು ವೈದ್ಯಾಧಿಕಾರಿಗಳು, ಕನಕಪುರ** |
| **ವಾಸ ಸ್ಥಳ** | **ಃ** | **ಕನಕಪುರ** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

**2014** ರಿಂದ ಕನಕಪುರ ತಾಲ್ಲೂಕು, ವೆಂಕಟರಾಯನದೊಡ್ಡಿಯ ಪಶು ಚಿಕಿತ್ಸಾಲಯದಲ್ಲಿ ಪಶು ವೈದ್ಯಾಧಿಕಾರಿಯಾಗಿ ನಾನು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**2.** ದಿಃ**16.12.2016** ರಂದು ಅರಣ್ಯ ಅಧಿಕಾರಿಯವರು ನನಗೆ ಆನೆ ಸತ್ತಿದೆ ಅದರ ಮರಣೋತ್ತರ ಪರೀಕ್ಷೆ ಮಾಡಬೇಕೆಂದು ಮನವಿ ಪತ್ರವನ್ನು ಕೊಟ್ಟಿದ್ದರು. ಅದೇ ದಿವಸ ನಾನು ಸ್ಥಳಕ್ಕೆ ಭೇಟಿ ಕೊಟ್ಟೆನು. ನಾನು ಅಲ್ಲಿ ಹೋಗಿ ನೋಡಿದಾಗ ಆನೆಯು ಸತ್ತು ಬಿದ್ದಿದ್ದು, ಆನೆಯು ಸೊಂಡಿಲಿಗೆ ವೈರುತಗುಲಿ ಸುತ್ತು ಕೊಂಡಿತ್ತು. ಆನೆಯು ಆ ವೈರನ್ನು ಸೊಂಡಿಲಿನಿಂದ ಮುಟ್ಟಿದಾಗ ಅದಕ್ಕೆ ಶಾಕ್ ಆಗಿದ್ದು, ಆ ಕಾರಣಕ್ಕೆ ಅದರ ಸೊಂಡಿಲಿನ ಸುತ್ತಲು ಜಿಂಕ್ ವೈರ್ ಸುತ್ತು ಕೊಂಡಿತ್ತು.

**3.** ನಾನು ಆನೆಯನ್ನು ನೋಡಿದಾಗ ಅದರ ಹೊಟ್ಟೆ ಉಬ್ಬರಗೊಂಡಿತ್ತು, ನಾನು ಆನೆಯನ್ನು ಪರೀಕ್ಷಿಸಿದಾಗ ಆನೆಯ ಸೊಂಡಿಲಿಗೆ ಕಟ್ಟಾಗಿರುವ ಗಾಯವಾಗಿತ್ತು. ಆನೆಯ ಬಾಯಿ ಮತ್ತು ಕಣ್ಣಿನ ಮೆಮರೇನ್ ಗಳಲ್ಲಿ ಕಂಜೆಶನ್ ಆಗಿತ್ತು. ಅದರ ಹೊಟ್ಟೆಯನ್ನು ಒಪನ್ ಮಾಡಿ ನೋಡಿದಾಗ **25** ಲೀ. ಕೆಟ್ಟ

ವಾಸನೆಯ ನೀರು ಇತ್ತು. ಅದರ ಹೃದಯ ಪೂರ್ತಿ ಸಣ್ಣದಾಗಿತ್ತು. ಅದರ ಮೆದುಳಿಗೆ ಹೈಪೋ ವಾಲ್ಯುಮಿಕ್ ಶಾಕ್ ಆಗಿತ್ತು. ಆ ಕಾರಣದಿಂದ ಅದರ ಸಾವಾಗಿತ್ತು. ಈ ಬಗ್ಗೆ ನಾನು ಪಿ.ಎಂ. ವರದಿಯನ್ನು ಕೊಟ್ಟಿದ್ದೇನೆ. ವರದಿಯನ್ನು ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಆನೆಗೆ ವಿದ್ಯುತ್ ಹರಿದಿದ್ದರಿಂದ ಅದರ ಸಾವಾಗಿದೆ. ಒಂದು ಪ್ರಾಣಿಗೆ ವಿದ್ಯುತ್ ಶಾಕ್ ಆದರೆ ನಾನು ವರದಿಯಲ್ಲಿ ಹೇಳಿರುವ ಕುರುಹುಗಳು ಆಗಿರುತ್ತವೆ. ನಾನು ಸ್ಥಳದಲ್ಲಿ ನೋಡಿದ ವೈರು ಮು.ಮಾ.1.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ.ಸಿ.ವಿ., ವಕೀಲರಿಂದಃ</u>**

4. ಆನೆ ಸತ್ತ ಒಂದು ಗಂಟೆಗೆ ಅದರ ಹೊಟ್ಟೆ ಉಬ್ಬುತ್ತದೆ. ನಿಪಿ.7 ಮತ್ತು 8 ರಲ್ಲಿ ಆನೆಯ ಸೊಂಡಿಲಿಗೆ ವೈರು ಸುತ್ತಿರುವುದು ಕಾಣಿಸುತ್ತಿಲ್ಲ ಎಂದರೆ ಸರಿ. ಆನೆಯ ಸೊಂಡಿಲಿಗೆ ಸುತ್ತಿದ್ದ ವೈರನ್ನು ನಾನು ತೆಗೆದು ಅದನ್ನು ಪೊಲೀಸರಿಗೆ ಕೊಟ್ಟಿಲ್ಲ. ಮೇನ್ ಲೈನ್ ನಿಂದ ವಿದ್ಯುತ್ ವೈರ್ ಕಟ್ಟಾಗಿ ಕೆಳಗೆ ಬಿದ್ದಿದ್ದು ಅದನ್ನು ಆನೆ ಮುಟ್ಟಿದ್ದರೆ ನನ್ನ ವರದಿಯಲ್ಲಿ ಹೇಳಿರುವಂತಹ ಗಾಯಗಳು ಮತ್ತು ಕುರುಹುಗಳು ಕಂಡು ಬರುತ್ತದೆ ಎಂದರೆ ಸರಿ.

**<u>ಮರುವಿಚಾರಣೆಃ ಇಲ್ಲ.</u>**

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ.ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**